

بِسْمِ اللّٰهِ الرَّحْمَنِ الرَّحِيم

# ಅಲ್ಲಾಹನ ಸಂಪ್ರೀತಿ ಗಳಿಸಲು ಪ್ರಯತ್ನಿಸಿ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಲಂಡನಿನ **'ಬೈತುಲ್ ಫುತೂಹ್'** ಮಸೀದಿಯಲ್ಲಿ **08–12–2017** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುದ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್ ಈ ಕೆಳಗಿನ ಪವಿತ್ರ ಖುರ್‌ಆನ್ ವಚನವನ್ನು ತಿಲಾವತ್ ಮಾಡಿದರು:*

زُيِّنَ لِلنَّاسِ حُبُّ الشَّهَوَاتِ مِنَ النِّسَاءِ وَالْبَنِينَ وَالْقَنَاطِيرِ الْمُقَنطَرَةِ مِنَ الذَّهَبِ وَالْفِضَّةِ وَالْخَيْلِ الْمُسَوَّمَةِ وَالْأَنْعَامِ وَالْحَرْثِ ۗ ذَٰلِكَ مَتَاعُ الْحَيَاةِ الدُّنْيَا ۖ وَاللَّهُ عِندَهُ حُسْنُ الْمَآبِ

**ಝುಯ್ಯಿನ ಲಿನ್ನಾಸಿ ಹುಬ್ಬುಶ್ಶಹವಾತಿ ಮಿನನ್ನಿಸಾಇ ವಲ್‌ಬನೀನ ವಲ್‌ಖನಾತೀರಿಲ್ ಮುಖನ್‌ತರತಿ ಮಿನದ್ದಹಬಿ ವಲ್‌ಫಿಝ್ಝತಿ ವಲ್‌ಖೈಲಿಲ್ ಮುಸವ್ವಮತಿ ವಲ್‌ಅನ್‌ಆಮಿ ವಲ್‌ಹರ್‌ಸ್. ದ್ಹಾಲಿಕ ಮತಾಉಲ್ ಹಯಾತಿದ್ದುನ್‌ಯಾ, ವಲ್ಲಾಹು ಇಂದಹೂ ಹುಸ್‌ನುಲ್‌ಮಆಬ್.**

ಮನುಷ್ಯರಿಗೆ ಸ್ತ್ರೀಯರು, ಮಕ್ಕಳು, ಚಿನ್ನ–ಬೆಳ್ಳಿಯ ಭವ್ಯ ಭಂಡಾರ, ಉತ್ತಮ ಜಾತಿಯ ಕುದುರೆಗಳು, ಜಾನುವಾರುಗಳು ಮತ್ತು ಕೃಷಿ ಭೂಮಿಗಳ ಮೇಲಿನ ಪ್ರೀತಿ ಆಕರ್ಷಕಗೊಳಿಸಲ್ಪಟ್ಟಿದೆ. ಇವೆಲ್ಲ ಐಹಿಕ ಜೀವನದ ಸುಖಸೌಕರ್ಯಗಳಾಗಿವೆ. ಆದರೆ ಅಲ್ಲಾಹನ ಬಳಿ ಅತ್ಯುತ್ತಮವಾದ ನಿವಾಸವಿದೆ. (3:15).

ಅಲ್ಲಾಹನು ಈ ವಚನದಲ್ಲಿ, ಅಲ್ಲಾಹನನ್ನು ಮರೆತುಬಿಟ್ಟು ಲೌಕಿಕ ಸುಖಸೌಲಭ್ಯಗಳನ್ನು ಗಳಿಸುವುದೇ ತಮ್ಮ ಉದ್ದೇಶಲಕ್ಷ್ಯವನ್ನಾಗಿ ಮಾಡಿಕೊಂಡವರನ್ನು ಚಿತ್ರಿಸಿದ್ದಾನೆ. ಮನುಷ್ಯನು ಅಲ್ಲಾಹನನ್ನು ಮರೆತುಬಿಡುವಾಗ ಶೈತಾನನು ಅವನನ್ನು ತನ್ನ ಸ್ವಾಧೀನಕ್ಕೊಳಪಡಿಸುತ್ತಾನೆ. ಇವೆಲ್ಲವೂ ಅಲ್ಲಾಹನು ಸೃಷ್ಟಿಸಿದವುಗಳೂ ಅಲ್ಲಾಹನ ಅನುಗ್ರಹಗಳೂ ಆಗಿವೆ. ಅವುಗಳಿಂದ ಪ್ರಯೋಜನವನ್ನೂ ಪಡೆಯಬೇಕಾಗಿವೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಬಹಳ ಸ್ಪಷ್ಟವಾಗಿ ಹೇಳಿದ್ದಾರೆ, ಲೌಕಿಕ ಕಾರ್ಯಗಳಿಂದ ದೂರಸರಿಯುವುದು ಸಹ ತಪ್ಪು ಕೆಲಸವಾಗಿದೆ ಎಂದು. ಉದಾಹರಣೆಗೆ ವಿವಾಹ. ಅದು ಆವಶ್ಯಕವಾಗಿದೆ. ಅದು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ನಡೆವಳಿಕೆಯೂ ಆಗಿದೆ. ಸಹಾಬರು ಸಹ ವಿವಿಧ ಲೌಕಿಕ ಕೆಲಸಗಳನ್ನು ಮಾಡುತ್ತಿದ್ದರು. ಕೆಲವು ಸಹಾಬರಿಗೆ ಕೋಟಿಗಟ್ಟಲೆ ಬೆಲೆಬಾಳುವ ಆಸ್ತಿಇದ್ದುವು. ಆದರೆ ಅವರು ಲೌಕಿಕ ಲಾಭದ ಕಡೆಗೆ ಮಾತ್ರ ಅಭಿಮುಖೀಕರಿಸುವವರಾಗಿರಲಿಲ್ಲ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ನೆನಪಿಡಿರಿ, ಅಲ್ಲಾಹನು ಖಂಡಿತವಾಗಿಯೂ ನೀವು ಲೌಕಿಕ ಕಾರ್ಯಗಳನ್ನು ಸಂಪೂರ್ಣವಾಗಿ ತ್ಯಜಿಸಬೇಕೆಂದು ಇಚ್ಛಿಸುವುದಿಲ್ಲ. ಅವನು ಇಚ್ಛಿಸುವುದೇನೆಂದರೆ قَدْ أَفْلَحَ مَن زَكَّاهَا **ಖದ್ ಅಫ್‌ಲಹ ಮನ್‌ಝುಕ್ಕಾಹಾ** ಆತ್ಮವನ್ನು ಪರಿಶುದ್ಧವಾಗಿರಿಸಿದವನು ಖಂಡಿತವಾಗಿಯೂ ಜಯಗಳಿಸಿದವನು ಎಂಬುದನ್ನಾಗಿದೆ (91:10). ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ನೀವು ವ್ಯಾಪಾರ ಮಾಡಿರಿ, ಕೃಷಿಕಾರ್ಯ ಮಾಡಿರಿ, ನೌಕರಿ ಮಾಡಿರಿ, ನೀವು ಇಚ್ಛಿಸುವ ವೃತ್ತಿಯನ್ನು ಮಾಡಿರಿ. ಆದರೆ ನೀವು ನಿಮ್ಮ ಆತ್ಮವನ್ನು ಅಲ್ಲಾಹನಿಗೆ ಅವಿಧೇಯವಾಗುವುದರಿಂದ ತಡೆಗಟ್ಟುತ್ತಾ ಇರಬೇಕು. ನೀವು ಎಂತಹ ಪರಿಶುದ್ಧಿಯನ್ನು ಗಳಿಸಬೇಕೆಂದರೆ ಈ ವಿಷಯಗಳು ನಿಮ್ಮನ್ನು ನೀವು ಅಲ್ಲಾಹನ ಬಗ್ಗೆ ನಿರ್ಲಕ್ಷ್ಯತೆ ಹೊಂದುವಂತೆ ಮಾಡುವವುಗಳಾಗಬಾರದು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಒಂದು ಸ್ಥಳದಲ್ಲಿ ಹೀಗೆ ಹೇಳುತ್ತಾರೆ: ನಿಮ್ಮ ಆತ್ಮದ ಹಕ್ಕುಗಳನ್ನು ಈಡೇರಿಸುವುದು ಅನುವದನೀಯವಾಗಿದೆ. ಆದರೆ ಮಿತಿಮೀರಿ ವರ್ತಿಸುವುದು ಧರ್ಮಬದ್ಧವಲ್ಲ. ಒಬ್ಬ ಸತ್ಯವಿಶ್ವಾಸಿ ಯಾವಾಗಲೂ ನೆನಪಿಡಬೇಕಾದುದೇನೆಂದರೆ ಲೌಕಿಕ ವಸ್ತುಗಳ ಬಗ್ಗೆ ಅವನಿಗಿರುವ ಪ್ರೀತಿ ಅವನನ್ನು ಅಲ್ಲಾಹನನ್ನು ಮರೆತುಬಿಡುವಂತೆ ಮಾಡಬಾರದು. ಅಲ್ಲಾಹನು ಹೇಳಿದ್ದಾನೆ, زُيِّنَ لِلنَّاسِ حُبُّ الشَّهَوَاتِ **ಝುಯ್ಯಿನ ಲಿನ್ನಾಸಿ ಹುಬ್ಬುಶ್ಶಹವಾತಿ.** ಮನುಷ್ಯನಿಗೆ ಶಹವಾತುಗಳ ಬಗ್ಗೆ ಪ್ರೀತಿಯನ್ನು ಆಕರ್ಷಕಗೊಳಿಸಲಾಗಿದೆ ಎಂದು. ಅನಂತರ ಮನುಷ್ಯನು ಪ್ರೀತಿಸುವ ವಸ್ತುಗಳು ಯಾವುವು ಎಂದು ವಿವರಿಸಲಾಗಿವೆ. ಈ ವಚನದಲ್ಲಿ ಈ ಲೌಕಿಕ ವಸ್ತುಗಳ ಪ್ರೀತಿಯಲ್ಲಿ ಮುಳುಗಿ ಕೇವಲ ಅವುಗಳನ್ನು ಗಳಿಸುವ ಬಗ್ಗೆ ಚಿಂತಿಸುವವರ ಬಗ್ಗೆ ಪ್ರಸ್ತಾಪಿಸಲಾಗಿದೆ. ಅಲ್ಲಾಹನು ಮುಸ್ಲಿಮರಿಗೆ ಎಷ್ಟು ಸುಂದರ ಮತ್ತು ಪರಿಶುದ್ಧ ಉಪದೇಶ ನೀಡಿದ್ದಾನೆ. ಅವನು ಎಚ್ಚರಿಕೆ ಸಹ ನೀಡಿದ್ದಾನೆ. ಇವುಗಳನ್ನು ಗಳಿಸುವುದು ಮಾತ್ರ ನಿಮ್ಮ ಜೀವಿತದ ಉದ್ದೇಶಲಕ್ಷ್ಯಗಳಾಗಬಾರದೆಂದು. ಏಕೆಂದರೆ ಅವುಗಳು ತಾತ್ಕಾಲಿಕ ಪ್ರಯೋಜನ ನೀಡುವ ಲೌಕಿಕ ವಸ್ತುಗಳಾಗಿವೆ. ನೀವು ನಿಮ್ಮ ಬಗ್ಗೆ ಚಿಂತಿಸಿರಿ. ನೀವು ಅಲ್ಲಾಹನ ಕಡೆಗೆ ಮರಳಲಿರುವವರಾಗಿರುವಿರಿ. ಅವನ ಮುಂದೆ ಹಾಜರಾಗುವವರಾಗಿರುವಿರಿ ಎಂದು ಅಲ್ಲಾಹನು ಹೇಳಿರುವನು. ಆದರೆ ಮುಸ್ಲಿಮರಲ್ಲಿ ಬಹುಸಂಖ್ಯಾತ ಜನರು ಲೌಕಿಕ ಸಾಮಗ್ರಿಗಳನ್ನು ಗಳಿಸುವ ಕಾರ್ಯದಲ್ಲಿ ನಿರತವಾಗಿದ್ದಾರೆ ಮತ್ತು ತಮ್ಮ ಜೀವಿತದ ವಾಸ್ತವಿಕ ಉದ್ದೇಶವನ್ನು ಮರೆತು ಬಿಟ್ಟಿರುತ್ತಾರೆ. ಮತಪಂಡಿತರು, ಸಮಾಜದ ನಾಯಕರು ಮತ್ತು ಸಂದರ್ಭ ದೊರೆತ ಪ್ರತಿಯೊಬ್ಬ ವ್ಯಕ್ತಿ ಪ್ರಯತ್ನಿಸುವುದೇನೆಂದರೆ ಹೇಗಾದರೂ ಈ ಲೌಕಿಕ ವಸ್ತುಗಳನ್ನು ಗಳಿಸಬೇಕೆಂದು. ಸಮಾಜದ ನಾಯಕರಾದವರಲ್ಲಿ ಇಂತಹ ಆಶೆಗಳು ತಲೆದೋರಿದರೆ ಅವರ ದೇಶಗಳಿಗೂ ಸಮುದಾಯಗಳಿಗೂ ಹಾನಿ ಉಂಟಾಗಲು ಪ್ರಾರಂಭವಾಗುತ್ತದೆ.

ಇಂದಿನ ಕಾಲದಲ್ಲಿ ಮುಸ್ಲಿಮ್ ದೇಶಗಳಲ್ಲಿ ಕಂಡುಬರುವ ಅಸ್ತವ್ಯಸ್ಥತೆಯ ಪರಿಸ್ಥಿತಿಗೆ ಕಾರಣವೇನೆಂದರೆ

ಅಲ್ಲಾಹನು ಧರ್ಮದಿಂದ ದೂರಸರಿಯುವವರ ಮತ್ತು ಲೌಕಿಕ ಕಾರ್ಯಗಳಲ್ಲಿ ಮಾತ್ರ ನಿರತರಾಗುವವರ ಯಾವ ಸ್ಥಿತಿಯನ್ನು ವಿವರಿಸಿರುವನೋ ಆ ಸ್ಥಿತಿ ಮುಸ್ಲಿಮರದಾಗಿದೆ. ಜನರಿಗೆ ಸೇವೆ ಮಾಡುತ್ತೇವೆ ಎಂಬ ಘೋಷಣೆಯೊಂದಿಗೆ ರಾಜಕೀಯ ಧುರೀಣರು ಅಧಿಕಾರವನ್ನು ಪಡೆಯುತ್ತಾರೆ. ಅನಂತರ ಎರಡು ಕೈಗಳಿಂದಲೂ ಹೇಗೆ ರಾಷ್ಟ್ರೀಯ ಸಂಪತ್ತನ್ನು ಲೂಟಿ ಮಾಡುತ್ತಾರೆಂದರೆ ಅದು ಕಲ್ಪನಾತೀತವಾಗಿರುತ್ತದೆ. ಮತಪಂಡಿತರಿಗೆ ಜನರ ಧಾರ್ಮಿಕ ಸ್ಥಿತಿಯನ್ನು ಉತ್ತಮಗೊಳಿಸುವ ಬಗ್ಗೆ ಬಹಳ ಕಡಿಮೆ ಚಿಂತೆ ಇರುತ್ತದೆ. ಅವರು ಮುಖ್ಯವಾಗಿ ಪ್ರಯತ್ನ ಮಾಡುತ್ತಿರುವುದು ಧರ್ಮದ ಹೆಸರಿನಲ್ಲಿ ಜನರು ತಮ್ಮನ್ನು ಹಿಂಬಾಲಿಸುವಂತೆ ಮಾಡಿ ಯಾವುದಾದರೂ ರೀತಿಯಲ್ಲಿ ಅಧಿಕಾರ ಪಡೆಯಲಿಕ್ಕಾಗಿದೆ. ಅಥವಾ ಸರಕಾರದಿಂದ ಸಹಾಯ ಪಡೆದು ಸಂಪತ್ತು ಮತ್ತು ಸ್ವತ್ತನ್ನು ಸಂಗ್ರಹಿಸುವುದಾಗಿದೆ. ಈ ಜನರು ಅಲ್ಲಾಹನ ನಾಮವನ್ನು ಉಚ್ಚರಿಸುತ್ತಾರಾದರೂ ಅವರ ವರ್ತನೆಯಲ್ಲಿ ಅಲ್ಲಾಹನನ್ನು ಭಯಪಡುವುದರ ಬಗ್ಗೆ ಯಾವ ಚಿಹ್ನೆಯನ್ನೂ ಕಾಣಲಾರೆವು. ಪಾಕಿಸ್ಥಾನದಲ್ಲಿ ಇದು ಸರ್ವಸಾಮಾನ್ಯವಾಗಿ ಕಂಡುಬರುತ್ತದೆ. ಮುಸ್ಲಿಮ್ ನಾಯಕರು ಮುಸ್ಲಿಮರಾದ ಜನಸಾಮಾನ್ಯರನ್ನು ತರಕಾರಿ ವಸ್ತುಗಳ ಹಾಗೆ ಕೊಲ್ಲುತ್ತಿದ್ದಾರೆ. ಅಲ್ಲಿ ಮನುಷ್ಯರ ಜೀವಕ್ಕೆ ಯಾವ ಬೆಲೆಯೂ ಇಲ್ಲ. ಆದರೆ ಅಧಿಕಾರದಲ್ಲಿರುವವರು ಅಧಿಕಾರ ಬಿಡಲು ತಯಾರಾಗುವುದಿಲ್ಲ. ಅನೇಕ ದೇಶಗಳಲ್ಲಿ ಇಂತಹ ಪರಿಸ್ಥಿತಿಗಳಿವೆ. ಆದರೆ ಅಲ್ಲಿನ ಸರಕಾರಗಳು ಪ್ರಯತ್ನಿಸುತ್ತಿರುವುದು ಅಧಿಕಾರದಲ್ಲಿಯೇ ಇರಬೇಕೆಂದು. ತಮ್ಮ ಶಕ್ತಿಯನ್ನು ಪ್ರದರ್ಶಿಸಬೇಕೆಂದು ಮತ್ತು ಸಂಪತ್ತನ್ನು ಸಂಗ್ರಹಿಸುತ್ತಾ ಇರಬೇಕೆಂದು. ಆದರೆ ಅವರ ಹೊಟ್ಟೆ ಯಾವುದಾದರೂ ರೀತಿಯಲ್ಲಿ ಭರ್ತಿಯಾಗುವುದೂ ಇಲ್ಲ. ಮುಸ್ಲಿಮ್ ದೇಶಗಳಲ್ಲಿ ಸಂಪತ್ತು ಇದ್ದರೂ, ಪ್ರಾಕೃತಿಕ ಸಂಪನ್ಮೂಲಗಳಿದ್ದರೂ ಆ ದೇಶಗಳಲ್ಲಿರುವ ಬಡವರು ಇನ್ನಷ್ಟು ಬಡವರಾಗುತ್ತಾ ಇರುವ ಕಾರಣವಾದರೂ ಏನು? ಅವರಿಗೆ ಒಂದು ಹೊತ್ತಿನ ರೊಟ್ಟಿ ಸಹ ಬಹಳ ಕಷ್ಟದಿಂದ ಲಭಿಸುತ್ತದೆ. ಸೌದಿ ಅರೇಬಿಯಾ ಶ್ರೀಮಂತ ದೇಶವೆಂದು ಗಣಿಸಲ್ಪಡುತ್ತದೆ. ಆದರೆ ಅಲ್ಲಿ ಸಹ ಈಗ ದಾರಿದ್ರ್ಯ ವರ್ಧಿಸುತ್ತಾ ಇದೆ. ಅಲ್ಲಿನ ಜನರು ಹಿಂದೆ ಸಹ ಬಡವರೇ ಆಗಿದ್ದರು. ಈಗ ಅವರ ದಾರಿದ್ರ್ಯ ವರ್ಧಿಸುತ್ತಾ ಇದೆ. ತೈಲ ಸಂಪತ್ತು ಇದ್ದರೂ ದಾರಿದ್ರ್ಯ ಅತ್ಯಂತ ಹೆಚ್ಚಿನ ಮಟ್ಟದಲ್ಲಿದೆ. ರಾಜ ಕುಟುಂಬದವರ ಮತ್ತು ನಾಯಕರ ಸ್ಥಿತಿ ಮಾತ್ರ ಉತ್ತಮವಾಗಿದೆ. ಅವರು ಒಂದು ದಿನದಲ್ಲಿ ಸಹ ಅನೇಕ ಮಿಲಿಯನ್ ಡಾಲರ್ ಖರ್ಚು ಮಾಡುತ್ತಾರೆ. ಈ ಜನರು ಅನುಚಿತ ರೀತಿಯಲ್ಲಿ ಸಂಪತ್ತು ಸಂಗ್ರಹಿಸುತ್ತಾರೆ. ಬಡವರ ಹಕ್ಕುಗಳನ್ನು ಕಸಿದುಕೊಳ್ಳುತ್ತಾರೆ. ಮತ್ತು ತಪ್ಪಾದ ರೀತಿಯಲ್ಲಿಯೇ ಖರ್ಚು ಸಹ ಮಾಡುತ್ತಾರೆ. ಅಲ್ಲಾಹನು ಈ ಜನರಿಗೆ, ಈ ಅಧಿಕಾರಾರೂಢರಿಗೆ, ದೊರೆಗಳಿಗೆ, ಸ್ವಾರ್ಥಿಗಳಾದವರಿಗೆ ಬುದ್ಧಿಯನ್ನು ದಯಪಾಲಿಸಲಿ. ಅವರು ಸಂಪತ್ತನ್ನು ಸಂಗ್ರಹಿಸುವವರಾಗುವುದಕ್ಕೆ ಬದಲಾಗಿ ಸಂಪತ್ತನ್ನು ಸರಿಯಾದ ರೀತಿಯಲ್ಲಿ ವಿನಿಯೋಗಿಸುವವರಾಗಲಿ. ಹೀಗೆ ಮಾಡುವವರಾದರೆ ಅವರು ಅಲ್ಲಾಹನ ಸಂಪ್ರೀತಿಗಳಿಸುವವರಾಗುವರಲ್ಲದೆ ಲೌಕಿಕವಾಗಿ ಸಹ ಅವರು ಶಕ್ತಿಶಾಲಿಗಳಾಗುವರು. ಮುಸ್ಲಿಮೇತರ ಶಕ್ತಿಗಳು ಅವರನ್ನು ತಮ್ಮ ಹಿಂದೆ ಹಿಂಬಾಲಿಸುವಂತೆ ಮಾಡುವುದಕ್ಕೆ ಬದಲಾಗಿ, ಬೆದರಿಸುವುದಕ್ಕೆ ಬದಲಾಗಿ ಅವರ ಮಾತುಗಳನ್ನು ಅಂಗೀಕರಿಸುವವರಾಗುವರು.

ಈಗ ಬಹಳ ಬೊಬ್ಬೆ ಹಾಕಲಾಗುತ್ತಿದೆ, ಅಮೇರಿಕದ ಅಧ್ಯಕ್ಷರು ಇಸ್ರಾಯೇಲ್‌ನ ತಮ್ಮ ರಾಯಭಾರಿ ಕಚೇರಿಯನ್ನು ಜೆರುಸಲೇಮಿಗೆ ವರ್ಗಾಯಿಸುವುದಾಗಿ ಪ್ರಕಟಿಸಿದ ಬಗ್ಗೆ ಮತ್ತು ಅದನ್ನು ಇಸ್ರಾಯೇಲ್‌ನ ರಾಜಧಾನಿ ಎಂದು ಘೋಷಿಸಿದ ಬಗ್ಗೆ. ವಾಸ್ತವಿಕವಾಗಿ ಈಗಾಗಲೇ ಅಲ್ಲಿ ಇಸ್ರಾಯೇಲ್ ದೇಶದ ಎಲ್ಲಾ ಕಚೇರಿಗಳು ಇವೆ. ಆದರೆ ಹೊರಗಿನ ದೇಶಗಳು ಜೆರುಸಲೇಮನ್ನು ಇಸ್ರಾಯೇಲ್ ರಾಜಧಾನಿಯಾಗಿ ಅಂಗೀಕರಿಸಿರಲಿಲ್ಲ. ಈ ಪ್ರಕಟಣೆಯ ನಂತರ ಹೊರಗಿನ ಲೋಕದಲ್ಲಿ ಬಹಳ ಪ್ರತಿಭಟನೆಗಳಿವೆ. ಸರಕಾರಗಳು ವಿರೋಧಿಸುತ್ತಲೂ ಇವೆ. ಆದರೆ ಹೀಗೆಲ್ಲಾ ಸಂಭವಿಸುವುದು ಮುಸ್ಲಿಮರ ಬಲಹೀನತೆಯ ಕಾರಣದಿಂದಾಗಿದೆ. ಮುಸ್ಲಿಮ್ ದೇಶಗಳು ಪರಸ್ಪರ ಕಾದಾಡುತ್ತಿರುವುದರಿಂದ, ಮತ್ತು ಮುಸ್ಲಿಮ್ ದೇಶಗಳೊಳಗಿರುವ ಅಶಾಂತಿಯ ಸ್ಥಿತಿಯ ಕಾರಣ ವಿದೇಶೀಯ ಶಕ್ತಿಗಳು ಇಂತಹ ಸ್ಥಿತಿ ಉಂಟು ಮಾಡಲು ಕಾರಣವಾಗಿವೆ. ಮತ್ತು ಈ ರೀತಿಯ ಘೋಷಣೆ ನೀಡುವಂತೆ ಮಾಡಿವೆ. ಮುಸ್ಲಿಮ್ ದೇಶಗಳ ಮಧ್ಯೆ ಪರಸ್ಪರ ಶಾಂತಿಯ ಸ್ಥಿತಿ ಎಂದೂ ಇರಬಾರದೆಂದು ಅಮೇರಿಕದ ಅಧ್ಯಕ್ಷರು ಇಚ್ಛಿಸುತ್ತಾರೆ. ತನಗಿಷ್ಟ ಬಂದಂತೆ ಅಲ್ಲಿ ಕಾರ್ಯವೆಸಗಬೇಕೆಂದು ಅವರು ಬಯಸುತ್ತಾರೆ. ಅಮೇರಿಕದ ಅಧ್ಯಕ್ಷರ ಪ್ರಕಟಣೆ ಯಾವ ರೀತಿಯಲ್ಲಿಯೂ ಅಂಗೀಕಾರಾರ್ಹವಲ್ಲ ಎಂದು ಸೌದಿ ಅರೇಬಿಯಾ ಪ್ರಕಟಿಸಿದೆ. ಕೆಲವು ದಿನಗಳ ಹಿಂದಿನ ತನಕ ಸೌದಿ ಸರಕಾರ ಅಮೇರಿಕದ ಅಧ್ಯಕ್ಷರ ಪ್ರತಿಯೊಂದು ಮಾತಿಗೆ ಹೂಂಗುಟ್ಟುತ್ತಿತ್ತು. ಇರಾನಿನ ವಿರುದ್ಧ ಅಮೇರಿಕದ ಹೇಳಿಕೆಗೆ ಹೂಂಗುಟ್ಟುತ್ತಾ ಇತ್ತು. ಆ ಸಮಯದಲ್ಲಿ ಸೌದಿ ಅರೇಬಿಯಾ ಅಮೇರಿಕದ ಅಧ್ಯಕ್ಷರೊಂದಿಗೆ ಹೇಳಬೇಕಾಗಿತ್ತು, ನಾವು ಮುಸ್ಲಿಮ್ ದೇಶದ ಜೊತೆಗೆ ಇದ್ದೇವೆ, ಆದುದರಿಂದ ಯಾವುದಾದರೂ ಮಹಾಶಕ್ತಿ ಮುಸ್ಲಿಮರ ವಿರುದ್ಧ ನಡೆಸುವ ಯಾವುದೇ ಕಾರ್ಯವನ್ನು ನಾವು ಸಹಿಸಲಾರೆವು ಎಂದು. ಅದೇ ರೀತಿ ಸೌದಿ ಅರೇಬಿಯಾ ಯಮನ್ ವಿರುದ್ಧ ಹೂಡುತ್ತಿರುವ ಯುದ್ಧದಲ್ಲಿ ಸಹ ಮಹಾಶಕ್ತಿಗಳಿಂದ ಸಹಾಯ ಪಡೆಯುತ್ತಿದೆ. ಅಮೇರಿಕದಿಂದ ನೆರವು ಪಡೆಯಲು ಅದು ಅಮೇರಿಕದ ಜೊತೆಗೆ ಹೂಂಗುಟ್ಟಿತು. ಲೋಕದ ತಾತ್ಕಾಲಿಕ ವಸ್ತುಗಳಿಗೋಸ್ಕರ ಅಲ್ಲಾಹನ ಆಜ್ಞೆಗಳಿಂದ ದೂರ ಸರಿಯಿತು. ***ಅಲ್ಲಾಹನ ಆಜ್ಞೆಗಳಿಗೆ ಅವಿಧೇಯರಾಗುವುದರಿಂದ ಉಂಟಾಗುವ ಪರಿಣಾಮವೇ ಈಗ ಉಂಟಾಗುತ್ತಿದೆ.*** ಮಹಾಶಕ್ತಿ ರಾಷ್ಟ್ರಗಳು ತಲೆಯ ಮೇಲೇರುತ್ತಾ ಇದ್ದಾರೆ.

ಲೌಕಿಕ ಲಾಭವನ್ನು ಅನ್ವೇಷಿಸುವವರನ್ನು ಮತ್ತು ಲೌಕಿಕ ಆಶೆಗಳನ್ನು ಈಡೇರಿಸುವ ಚಿಂತೆಯಲ್ಲಿ ಮಗ್ನರಾಗಿರುವವರನ್ನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ತುರಿಕೆಯ ರೋಗಪೀಡಿತರಿಗೆ ಹೋಲಿಸಿ ಹೇಳಿದ್ದಾರೆ. ಅವರು

ತುರಿಸುವಾಗ ಅವರಿಗೆ ಸುಖ ಸಿಗುತ್ತದೆ. ಅವರು ದೇಹವನ್ನು ತುರಿಸುತ್ತಾ ಭಾವಿಸುತ್ತಾರೆ ನನಗೆ ತುಂಬಾ ಸುಖ ಸಿಗುತ್ತಿದೆ ಎಂದು. ಆದರೆ ವಾಸ್ತವದಲ್ಲಿ ಅವರು ತಮ್ಮ ದೇಹವನ್ನು ಗಾಯಗೊಳಿಸುತ್ತಾ ಇರುತ್ತಾರೆ.

ಇದೇ ವಿಷಯವನ್ನು ಅಲ್ಲಾಹನು ಪವಿತ್ರ ಖುರ್‌ಆನಿನಲ್ಲಿ ಬೇರೆ ಒಂದು ಸ್ಥಳದಲ್ಲಿ ಹೀಗೆ ವಿವರಿಸಿದ್ದಾನೆ:

اعْلَمُوا أَنَّمَا الْحَيَاةُ الدُّنْيَا لَعِبٌ وَلَهْوٌ وَزِينَةٌ وَتَفَاخُرٌ بَيْنَكُمْ وَتَكَاثُرٌ فِي الْأَمْوَالِ وَالْأَوْلَادِ ۖ كَمَثَلِ غَيْثٍ أَعْجَبَ الْكُفَّارَ نَبَاتُهُ ثُمَّ يَهِيجُ فَتَرَاهُ مُصْفَرًّا ثُمَّ يَكُونُ حُطَامًا ۖ وَفِي الْآخِرَةِ عَذَابٌ شَدِيدٌ وَمَغْفِرَةٌ مِّنَ اللَّهِ وَرِضْوَانٌ ۚ وَمَا الْحَيَاةُ الدُّنْيَا إِلَّا مَتَاعُ الْغُرُورِ

**ಇಅ್‌ಲಮೂ ಅನ್ನಮಲ್ ಹಯಾತುದ್ದುನ್‌ಯಾ ಲಯಿಬುನ್ ವಲಹ್‌ವುನ್ ವ ಝೀನತುನ್ ವ ತಫಾಖುರುನ್ ಬೈನಕುಮ್ ವತಕಾಸುರುನ್ ಫಿಲ್ ಅಮ್‌ವಾಲಿ ವಲ್ ಅವ್‌ಲಾದ್. ಕಮಸಲಿ ಗೈಸಿನ್ ಅಅ್‌ಜಬಲ್ ಕುಫ್ಫಾರ ನಬಾತುಹೂ ಸುಮ್ಮ ಯಹೀಜು ಫತರಾಹು ಮುಸ್‌ಫರ್ರನ್ ಸುಮ್ಮ ಯಕೂನು ಹುತಾಮನ್. ವಫಿಲ್ ಆಖಿರತಿ ಅದ್ಹಾಬುನ್ ಶದೀದುನ್ ವ ಮಗ್‌ಫಿರತುನ್ ಮಿನಲ್ಲಾಹಿ ವರಿಝ್‌ವಾನ್. ವಮಲ್‌ಹಯಾತುದ್ದುನ್‌ಯಾ ಇಲ್ಲಾ ಮತಾಉಲ್ ಗುರೂರ್.**

ತಿಳಿದುಕೊಳ್ಳಿರಿ, ಇಹಲೋಕ ಜೀವನ ಒಂದು ಆಟವೂ ವಿನೋದವೂ ಅಲಂಕಾರವೂ ನೀವು ಪರಸ್ಪರ ಡಂಭಾಚಾರ ಮಾಡುವುದೂ ಸಂಪತ್ತು ಮತ್ತು ಸಂತತಿಗಳಲ್ಲಿ ಹೆಮ್ಮೆ ಪಡುವುದೂ ಮಾತ್ರವಾಗಿದೆ. (ಇಹಲೋಕ ಜೀವನ) ಒಂದು ಮಳೆಯ ಹಾಗೆ. ಆ ಮೂಲಕ ಉತ್ಪನ್ನವಾದ ಬೆಳೆಯು ಕೃಷಿಕನನ್ನು ಸಂತೋಷಪಡಿಸುತ್ತದೆ. ಅನಂತರ ಅದು ಒಣಗಿ ಹೋದಾಗ, ಅದು ಹಳದಿ ಬಣ್ಣಕ್ಕೆ ತಿರುಗುವುದನ್ನು ನೀನು ಕಾಣುವೆ. ಅನಂತರ ಅದು ಹುಲ್ಲು ಕಡ್ಡಿಗಳಾಗುತ್ತವೆ. ಪರಲೋಕದಲ್ಲಿ (ಅವಿಶ್ವಾಸಿಗಳಿಗೆ) ಕಠಿಣವಾದ ಶಿಕ್ಷೆ ಇದೆ. ಹಾಗೆಯೇ (ವಿಶ್ವಾಸಿಗಳಿಗೆ) ಅಲ್ಲಾಹನಿಂದ ಕ್ಷಮಾದಾನವೂ ಸಂತುಷ್ಟಿಯೂ ಇದೆ. ಐಹಿಕ ಜೀವನವು ಮೋಸಗೊಳಿಸುವ (ತಾತ್ಕಾಲಿಕ) ಸುಖಾನುಭವ ಮಾತ್ರವಾಗಿದೆ. (57:21).

ಒಬ್ಬ ಸತ್ಯವಿಶ್ವಾಸಿ ಮಾಡಬೇಕಾದ ಕೆಲಸವೇನೆಂದರೆ ಲೌಕಿಕ ಸಾಮಗ್ರಿಗಳನ್ನು ಗಳಿಸಿರುವ ಬಗ್ಗೆ ಹೆಮ್ಮೆಪಡಬಾರದು. ಅವುಗಳನ್ನು ಗಳಿಸಲು ಮಾತ್ರ ತಮ್ಮ ಎಲ್ಲಾ ಪ್ರಯತ್ನಗಳನ್ನು ಮಾಡುವುದಕ್ಕೆ ಬದಲಾಗಿ ಅಲ್ಲಾಹನನಿಂದ ಕ್ಷಮೆ ಯಾಚಿಸಲು ಮತ್ತು ಅವನ ಸಂಪ್ರೀತಿ ಗಳಿಸಲು ಸಹ ಪ್ರಯತ್ನಿಸಬೇಕು. ತುರಿಕೆ ರೋಗಪೀಡಿತನ ಹಾಗೆ ಆಗಿ ತಮ್ಮ ಜೀವಿತವನ್ನೂ ಅಂತಿಮಗತಿಯನ್ನೂ ಹಾಳು ಮಾಡಬಾರದು. ಇಹಲೋಕ ಜೀವಿತದ ಸಾಮಗ್ರಿಗಳು ಮತ್ತು ಸ್ಥಿತಿಯ ಬಗ್ಗೆ ಚಿತ್ರಿಸುತ್ತಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಒಂದು ಸಭೆಯಲ್ಲಿ ಹೇಳಿದರು: ಮನುಷ್ಯನು ಎಷ್ಟರ ಮಟ್ಟಿಗೆ ಮಾನಸಿಕ ಒತ್ತಡಗಳಿಂದ ರಕ್ಷಿಸಲ್ಪಡುತ್ತಾನೋ ಅಷ್ಟರ ಮಟ್ಟಿಗೆ ಅವನು ಸಂತೃಪ್ತನಾಗಿರುತ್ತಾನೆ. ಮಾನಸಿಕ ಒತ್ತಡದಿಂದ ಪೀಡಿತನಾದವನ ಹೃದಯದಲ್ಲಿ ಅಗ್ನಿ ಇರುತ್ತದೆ. ಅವನು ಕಷ್ಟಪಡುತ್ತಿರುತ್ತಾನೆ. ಇಹಲೋಕ ಜೀವಿತದಲ್ಲಿ ಸುಖ ಸಿಗುವುದು ಮಾನಸಿಕ ಒತ್ತಡಗಳಿಂದ ರಕ್ಷಿಸಲ್ಪಡುವಾಗ ಮಾತ್ರ ಆಗಿರುತ್ತದೆ. ಒಮ್ಮೆ ಒಬ್ಬನು ಕುದುರೆಯನ್ನೇರಿ ಹೋಗುತ್ತಿದ್ದನು. ಮಾರ್ಗದಲ್ಲಿ ಒಬ್ಬ ಫಕೀರನನ್ನು ಕಂಡನು. ಅವನು ಕೇವಲ ನಗ್ನತೆ ಮರೆಮಾಚುವಷ್ಟು ಮಾತ್ರ ಬಟ್ಟೆ ಧರಿಸಿದ್ದರು. ಕುದುರೆ ಸವಾರನು ಅವನೊಂದಿಗೆ ತಾವು ಹೇಗಿದ್ದೀರಿ? ಎಂದು ಕೇಳಿದನು. ಆ ಫಕೀರ ಹೇಳಿದನು: ಯಾರ ಎಲ್ಲಾ ಆಶೆಗಳು ಈಡೇರಿವೆಯೋ ಅವನ ಸ್ಥಿತಿ ಹೇಗಿರುತ್ತದೆಯೋ ಹಾಗೆ. ಆಗ ಕುದುರೆ ಸವಾರ ಕೇಳಿದನು: ನಿಮ್ಮ ಎಲ್ಲಾ ಆಶೆಗಳು ಈಡೇರಿದುದು ಹೇಗೆ? ಫಕೀರ್ ಹೇಳಿದನು: ಒಬ್ಬನು ತನ್ನ ಎಲ್ಲಾ ಆಶೆಗಳನ್ನು ತ್ಯಜಿಸಿದರೆ ಅವನ ಎಲ್ಲಾ ಆಶೆಗಳು ಈಡೇರಿದ ಹಾಗೆ ಆಗುತ್ತವೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಫಕೀರ ಹೇಳಿದುದರ ಉದ್ದೇಶಾರ್ಥವೇನೆಂದರೆ, ಆಶೆಗಳನ್ನು ಈಡೇರಿಸಲು ಇಚ್ಛಿಸುವಾಗ ಕಷ್ಟವಾಗುತ್ತದೆ. ಆದರೆ ಇದ್ದುದರಲ್ಲಿ ಸಂತೃಪ್ತನಾಗಿ ಆಶೆಗಳನ್ನು ಬಿಡುವುದಾದರೆ ಅವುಗಳು ಲಭಿಸಿದ ಹಾಗೆ ಆಗುತ್ತದೆ. ಮೋಕ್ಷ ಅಥವಾ ಮುಕ್ತಿ ಎಂದರೆ ಕಷ್ಟವಿಲ್ಲದಿರುವಿಕೆ ಮತ್ತು ಸುಖವಾಗುವಿಕೆ ಆಗಿದೆ. ಕಷ್ಟಕರವಾದ ಜೀವಿತ ಇಹಲೋಕದಲ್ಲಾಗಲಿ ಪರಲೋಕದಲ್ಲಾಗಲಿ ಒಳ್ಳೆಯದಾದುದೇನೂ ಅಲ್ಲ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಮತ್ತೂ ಹೇಳುತ್ತಾರೆ: ಇಹಲೋಕದ ಜೀವಿತ ಕೊನೆಗೊಳ್ಳುವುದಾಗಿದೆ. ಅದು ಮಂಜುಗಡ್ಡೆಯ ತುಂಡುಗಳ ಹಾಗಿದೆ. ನೀವು ಅವುಗಳನ್ನು ಪೆಟ್ಟಿಗೆಗಳಲ್ಲಿಯೂ ಬಟ್ಟೆಗಳಲ್ಲಿ ಸುತ್ತಿಯೂ ಇರಿಸಿದರೂ ಅವು ಕರಗಿ ಹೋಗುವುವು. ಆದುದರಿಂದ ಯೌವ್ವನ ಕಾಲವನ್ನು ಅನುಗ್ರಹವೆಂದು ಭಾವಿಸಬೇಕು. ಹಿಂದೆ ಅನುಭವಿಸಿದ ಸುಖದಿಂದ ಯಾವ ಲಾಭವೂ ಇಲ್ಲ. ಅದು ದಾಟಿಹೋದ ನಂತರ ಅದರ ಬಗ್ಗೆ ಕಲ್ಪಿಸುವಾಗ ದುಃಖವಾಗುತ್ತವೆ. ಕೆಲವು ಸಾರಿ ಹೇಗಾಗುತ್ತದೆ ಎಂದರೆ ಮನುಷ್ಯನು ಯಾವ ಕಷ್ಟದಿಂದ ಓಡಿ ಹೋಗಲು ಇಚ್ಛಿಸುತ್ತಾನೋ ಅದೇ ಕಷ್ಟದಲ್ಲಿ ಅವನು ಸಿಲುಕಿಸಲ್ಪಡುತ್ತಾನೆ. ಅವನ ಮಕ್ಕಳು ಸರಿಯಾಗಿರದಿದ್ದರೆ ಅವನ ಕಷ್ಟ ಇನ್ನಷ್ಟು ವರ್ಧಿಸುತ್ತದೆ. ಆಗ ಅವನು ಯೋಚಿಸುತ್ತಾನೆ, ನಾನು ತಪ್ಪಾದ ರೀತಿಯಲ್ಲಿ ಜೀವಿಸಿದೆ. ಜೀವನ ಹಾಗೆಯೇ ವ್ಯರ್ಥವಾಯಿತು. ಅಲ್ಲಾಹನ ಆಜ್ಞೆಗಳ ಪ್ರಕಾರ ಜೀವಿಸುತ್ತಿದ್ದರೆ ಉತ್ತಮವಾಗುತ್ತಿತ್ತು ಎಂದು ಆಗ ಅವನು ಯೋಚಿಸುತ್ತಾನೆ. ಅದಕ್ಕೆ ಬದಲಾಗಿ ಅಲ್ಲಾಹನನ್ನು ಮರೆತು ಜೀವಿಸಿದೆ ಎಂದು ಯೋಚಿಸುತ್ತಾನೆ.

ಆದುದರಿಂದ ಒಬ್ಬ ಸತ್ಯವಿಶ್ವಾಸಿ ಮಾಡಬೇಕಾದ ಕೆಲಸವೇನೆಂದರೆ ಲೌಕಿಕ ವಿಷಯಗಳ ಬಗ್ಗೆ ಚಿಂತಾಕುಲನಾಗದೆ ತನ್ನ ಪರಲೋಕ ಜೀವಿತವನ್ನು ಸರಿಪಡಿಸುವ ಬಗ್ಗೆ ಮತ್ತು ಅಲ್ಲಾಹನ ಪ್ರೀತಿ ಗಳಿಸುವ ಬಗ್ಗೆ ಚಿಂತಿಸಬೇಕು. ಸತ್ಯವಿಶ್ವಾಸಿ ಇದ್ದುದರಲ್ಲಿ ತೃಪ್ತಿ ಪಡೆದವನಾಗಬೇಕು. ಲೌಕಿಕ ಸಾಮಗ್ರಿಗಳನ್ನು ಅಲ್ಲಾಹನ ಅನುಗ್ರಹಗಳೆಂದು ಭಾವಿಸಿ ಉಪಯೋಗಿಸಬೇಕು. ಆದರೆ ಅವುಗಳನ್ನು ಆರಾಧ್ಯ ವಸ್ತುಗಳನ್ನಾಗಿ ಮಾಡಬಾರದು. ಆರಾಧನೆಗೆ ಅರ್ಹನು ನಮ್ಮ ವಾಸ್ತವಿಕ ಆರಾಧ್ಯನಾದ ಅಲ್ಲಾಹನಾಗಿದ್ದಾನೆ. ಅಲ್ಲಾಹನ ಬಗ್ಗೆ ಪ್ರೀತಿ

ಹೊಂದುವುದರಿಂದಲೇ ಮನುಷ್ಯನಲ್ಲಿ ತಖ್ವ ಹುಟ್ಟುತ್ತದೆ. ಮತ್ತು ಖಿನಾಅತ್ (ಇದ್ದುದರಲ್ಲಿ ಸಂತೃಪ್ತಿ) ಹುಟ್ಟಿಸುತ್ತದೆ. ಅಲ್ಲಾಹನು ಸತ್ಯವಿಶ್ವಾಸಿಗಳ ಚಿಹ್ನೆಯಾಗಿ ಹೇಳಿರುವುದೇನೆಂದರೆ ಅವರು ಅಲ್ಲಾಹನನ್ನು ಎಲ್ಲಕ್ಕಿಂತಲೂ ಹೆಚ್ಚಾಗಿ ಪ್ರೀತಿಸುತ್ತಾರೆ ಎಂದು. ಅಲ್ಲಾಹನು ಹೇಳುತ್ತಾನೆ, وَالَّذِينَ آمَنُوا أَشَدُّ حُبًّا لِلَّهِ **ವಲ್ಲಝೀನ ಆಮನೂ ಅಶದ್ದು ಹುಬ್ಬನ್‌ಲಿಲ್ಲಾಹ್.** ಸತ್ಯ ವಿಶ್ವಾಸಿಗಳು ಅಲ್ಲಾಹನನ್ನು ಅತ್ಯಂತ ಹೆಚ್ಚು ಪ್ರೀತಿಸುವವರಾಗಿದ್ದಾರೆ. (2:166).

ಅಲ್ಲಾಹನು ನಮ್ಮಲ್ಲಿ ಖಿನಾಅತ್ ಉಂಟುಮಾಡಲಿ. ತಖ್ವ ಉಂಟುಮಾಡಲಿ. ಲೌಕಿಕ ವಸ್ತುಗಳನ್ನು ಪ್ರೀತಿಸುವುದಕ್ಕೆ ಬದಲಾಗಿ ಅಲ್ಲಾಹನನ್ನು ಪ್ರೀತಿಸುವುದು ನಮ್ಮ ಉದ್ದೇಶಲಕ್ಷ್ಯವಾಗಲಿ. ಅಲ್ಲಾಹನಿಂದ ಕ್ಷಮಾಧಾನ ಲಭಿಸುವ ಮತ್ತು ಅವನ ಸಂಪ್ರೀತಿ ಗಳಿಸುವ ಭಾಗ್ಯವನ್ನು ಅಲ್ಲಾಹನು ನಮಗೆ ಕರುಣಿಸಲಿ – ಆಮೀನ್.

ಕೊನೆಯದಾಗಿ ನಾನು ಪ್ರಾರ್ಥನೆ ಬಗ್ಗೆ ನಿಮ್ಮ ಗಮನ ಸೆಳೆಯುತ್ತಿದ್ದೇನೆ. ನಾನು ಇದರ ಮೊದಲು ಸಂಕ್ಷಿಪ್ತವಾಗಿ ಹೇಳಿದ್ದೆ, ಮುಸ್ಲಿಮ್ ದೇಶಗಳ ನಾಯಕರು ಲೌಕಿಕ ಆಶಾಭಿಲಾಷೆಗಳನ್ನು ಹಿಂಬಾಲಿಸುತ್ತಿದ್ದಾರೆ. ಅವರು ಅಲ್ಲಾಹನಿಗೆ ಬದಲಾಗಿ ಮಹಾಶಕ್ತಿ ರಾಷ್ಟ್ರಗಳನ್ನು ತಮ್ಮ ದೇವರನ್ನಾಗಿ ತಮ್ಮ ಕೃತ್ಯಗಳಿಂದ ಮಾಡಿಕೊಂಡಿದ್ದಾರೆ. ಅವರೊಂದಿಗೆ ಸ್ನೇಹ ಸಂಬಂಧ ಸ್ಥಾಪಿಸುವುದು ತಮ್ಮ ಬದುಕುವಿಕೆಗೆ ಮತ್ತು ಅಭಿವೃದ್ಧಿಗೆ ಖಾತರಿಯಾಗುತ್ತದೆ ಎಂದು ಭಾವಿಸುತ್ತಿದ್ದಾರೆ. ಅಮೇರಿಕದ ಬಗ್ಗೆ ಜರ್ಮನಿಯ ಒಬ್ಬ ನಿರೂಪಕ ಹೀಗೆ ಹೇಳಿದ್ದಾರೆ: ಲೋಕವು ವಾಶಿಂಗ್‌ಟನನ್ನು ತನ್ನ ರೋಲ್ ಮೋಡಲ್ ಆಗಿ ಮಾಡಿಕೊಂಡಿದೆ. ಪ್ರಾಯಶಃ ಈಗ ಅದಕ್ಕೆ ಆ ಸ್ಥಾನವಿಲ್ಲ. ಏಕೆಂದರೆ ಈಗ ಚೀನದ ರಾಜಧಾನಿಯಾದ ಬೀಜಿಂಗ್ ರೋಲ್ ಮೋಡಲ್ ಆಗುತ್ತಿದೆ. ಅಮೇರಿಕ ಈಗ ತನ್ನ ಪ್ರಭಾವ ಕಳೆದುಕೊಂಡಿದೆ. ಅದು ಅದರ ಸ್ಥಾನವನ್ನು ಕಳೆದುಕೊಂಡಿದೆ.

ಆದುದರಿಂದ ಲೌಕಿಕ ಆಶ್ರಯಗಳು ತಾತ್ಕಾಲಿಕವಾಗಿರುತ್ತವೆ. ಇಂದು ಇದ್ದರೆ ನಾಳೆ ಇರುವುದಿಲ್ಲ. ಮುಸ್ಲಿಮರು ಈಗ ಅದರ ಬಗ್ಗೆ ಮನವರಿಕೆ ಮಾಡಿಕೊಳ್ಳಬೇಕು. ಜೆರುಸಲೇಮಿಗೆ ರಾಯಭಾರಿ ಕಚೇರಿಯನ್ನು ವರ್ಗಾಯಿಸುವ ಪ್ರಕಟಣೆ ಅಮೇರಿಕ ನೀಡಿರುವುದು ಬಹುಶಃ ಇಸ್ರಾಯೇಲ್‌ನೊಂದಿಗೆ ಅವರ ಸಂಬಂಧ ಉತ್ತಮವಾಗಿ ಹೆಚ್ಚು ಬಲಿಷ್ಠವಾಗಲಿಕ್ಕಾಗಿದೆ ಮತ್ತು ಅವರ ಪ್ರಭಾವವನ್ನು ವರ್ಧಿಸಲಿಕ್ಕೋಸ್ಕರವಾಗಿದೆ. ಆದರೆ ಅಲ್ಲಾಹನಿಂದ ಅಧಃಪತನ ನಿಶ್ಚಯಿಸಲ್ಪಡುವಾಗ ಲೌಕಿಕ ಸ್ನೇಹಗಳು ಮತ್ತು ಒಪ್ಪಂದಗಳು ಪ್ರಯೋಜನಕ್ಕೆ ಬರಲಾರವು. ಮಹಾಶಕ್ತಿ ದೇಶಗಳ ವಿರುದ್ಧ ಮತ್ತು ವಿಶಿಷ್ಟವಾಗಿ ಅಮೇರಿಕದ ವಿರುದ್ಧ ಈ ಪ್ರಕ್ರಿಯೆ ಪ್ರಾರಂಭವಾಗಿರುವುದಾಗಿ ತೋರುತ್ತದೆ. ಅದರ ಪರಿಣಾಮ ಯಾವಾಗ ಪ್ರಕಟವಾಗುವುದು ಎಂಬುದರ ಬಗ್ಗೆ ಅಲ್ಲಾಹನಿಗೆ ಮಾತ್ರ ಚೆನ್ನಾಗಿ ತಿಳಿದಿರುತ್ತದೆ. ಆದರೆ ಈ ಪರಿಸ್ಥಿತಿಗಳಲ್ಲಿ ಮುಸ್ಲಿಮರು ಪರಸ್ಪರ ಹೋರಾಡುವಂತೆ ಮಾಡುವ ಕೆಲಸ ಹೆಚ್ಚು ತೀವ್ರವಾಗುವುದು. ಆದುದರಿಂದ ಮುಸ್ಲಿಮ್ ಲೋಕಕ್ಕೋಸ್ಕರ ನಾವು ಪ್ರಾರ್ಥಿಸಬೇಕಾದ ಆವಶ್ಯಕತೆಯಿದೆ. ಅಲ್ಲಾಹನು ಅವರಿಗೆ ಸದ್ಬುದ್ಧಿ ನೀಡಲಿ ಎಂದು. ಅವರೆಲ್ಲರೂ ಐಕ್ಯವನ್ನು ಸ್ಥಾಪಿಸಲಿ. ಮುಸ್ಲಿಮ್ ದೇಶಗಳ ಮಧ್ಯೆ ಸಂಭವಿಸಬಹುದಾದ ಯುದ್ಧಗಳು ಸಹ ದೂರ ಸರಿಯುವಂತಾಗಲಿ. ಮುಸ್ಲಿಮ್ ದೇಶಗಳೊಳಗೆ ನಡೆಯುತ್ತಿರುವ ಆಂತರಿಕ ಕಲಹದಿಂದ ಸಹ ಲಕ್ಷಾಂತರ ಜೀವ ಹಾನಿ ಸಂಭವಿಸುತ್ತಾ ಇದೆ. ಅಲ್ಲಾಹನು ಅವರಿಗೆ ಸದ್ಬುದ್ಧಿ ನೀಡಿ ಅವುಗಳನ್ನು ನಿವಾರಿಸಲಿ ಮತ್ತು ಎಲ್ಲರೂ ಏಕ ಸಮುದಾಯವಾಗಿ ಜೀವಿಸುವವರಾಗಲಿ. ಪರಸ್ಪರ ನಡೆಯುತ್ತಿರುವ ಯುದ್ಧಗಳು ಕೊನೆಗೊಳ್ಳಲಿ. ಇಸ್ಲಾಮಿನ ಶತ್ರುಗಳು ಅವುಗಳಿಂದ ಲಾಭ ಪಡೆಯದಂತಾಗಲಿ. ಎಲ್ಲದಕ್ಕಿಂತಲೂ ಮಿಗಿಲಾಗಿ ಹೀಗೆ ಪ್ರಾರ್ಥಿಸಬೇಕು: ಅಲ್ಲಾಹನು ಕಳುಹಿಸಿದ ವಾಗ್ದತ್ತ ಮಹ್‌ದಿ ಮಸೀಹರನ್ನು ಮುಸ್ಲಿಮರು ಗುರುತಿಸುವವರಾಗಲಿ. ಅವರೊಂದಿಗೆ ಸಂಬಂಧವನ್ನು ಸ್ಥಾಪಿಸಿ ಅವರು ಪರಸ್ಪರ ಶಾಂತಿ ಸ್ಥಾಪಿಸುವವರೂ ಲೋಕದಲ್ಲಿ ಶಾಂತಿ ಸ್ಥಾಪಿಸುವವರೂ ಆಗಬಹುದಾಗಿದೆ.

*****

***Friday Sermon delivered by Hadrath Khaleefatul Masih Al Khamis*** *(atba)*

*At Masjid Baithul Futhuh, London. on 08-12-2017.*

**Summarized by** *Majlis Ansarullah Bharat*

***Kannada Translation:*** M. Ubeidullah for Kannada Desk, Qadian

***Reviewed by:*** M.P Ibrahim | ***Typing:*** U Basheer Ahmad

***Published By:*** Kannada Isha'at Team for Nazarath Nashr-O-Isha'ath, Qadian

***Email***: *khutuba.kannada@gmail.com*

**You can find all the Sermons archived at**: www.alislam.org/friday-sermon